

..ಅಬ್ಬಬ್ಬಾ! ಚಳಿಯೇ ಮನೆಯ ಹೊರಗಿಟ್ಟ
9 ನಂಬರ್ ಚಪ್ಪಲಿ 8 ನಂಬರ್ ಆಗಿಬಿಟ್ಟಿದೆ!










ಸರ್.. ನಮ್ಮ ಮೊಬೈಲ್‌ಗಳಿಗೂ 'ಪಾಸ್'
ಮಾಡಿ ಪ್ಲೀಸ್!







ಮಗುವನ್ನು ಯಾರು ಸಾಕುವುದೆಂದು ಇನ್ನೂ
ತೀರ್ಮಾನವಾಗಿಲ್ಲ ಆದರೆ ಡೈವೋರ್ಸ್ ಆಗಿದೆ!

## ನಕ್ಕು ಬಿಡಿ



ದಂತ ವೈದ್ಯ: 'ನಿಮಗೆ ಜ್ಞಾನ ತಪ್ಪಿಸಿ ಹಲ್ಲುಗಳನ್ನು ಕೀಳಬೇಕಾಗಿದೆ.'
ರೋಗಿ: 'ಹಾಗಾದರೆ ತಡೆಯಿರಿ' ಎಂದು ಜೇಬಿನಲ್ಲಿದ್ದ ಹಣ ತೆಗೆದ.
ದಂತ ವೈದ್ಯ: 'ನೀವೇನೂ ಮುಂಗಡವಾಗಿ ಹಣ ಕೊಡಬೇಕಾಗಿಲ್ಲ.'
ರೋಗಿ: 'ಅದಕ್ಕಲ್ಲ ಡಾಕ್ಟರ್, ನೀವು ಜ್ಞಾನ ತಪ್ಪಿಸುವ ಮುಂಚೆ ಹಣ ಎಷ್ಟಿದೆ ಅಂತ ನೋಡಿಕೊಳ್ಳುತ್ತಿದ್ದೇನೆ!'

★★★

ವ್ಯಕ್ತಿ: 'ಒಳ್ಳೆಯ ಔಷಧಿ ಕೊಟ್ಟು ತುಂಬ ಉಪಕಾರ ಮಾಡಿದಿರಿ.'
ಡಾಕ್ಟರ್: 'ಅಲ್ಲಪ್ಪ, ನಿನಗೆ ನಾನು ಯಾವಾಗ ಔಷಧಿ ಕೊಟ್ಟೆ?'
ವ್ಯಕ್ತಿ: 'ನನಗಲ್ಲ ಡಾಕ್ಟ್ರೇ, ನಮ್ಮ ದೊಡ್ಡಪ್ಪ... ನಿಮ್ಮ ಪೇಷಂಟು. ನಿಮ್ಮ ಔಷಧಿ ತೆಗೆದುಕೊಂಡ ಎರಡೇ ದಿನಕ್ಕೆ ತೀರಿಹೋದರು. ಅವರ ಎಲ್ಲ ಆಸ್ತಿ ಈಗ ನನಗೆ ಬಂದಿದೆ!'

★★★



ರೋಗಿ: 'ಡಾಕ್ಟ್ರೇ, ನೀವು ಕೊಟ್ಟ ಈ ಕನ್ನಡಕ ಹಾಕಿಕೊಂಡರೆ ನಾನು ಓದಬಹುದೆ?'
ನೇತ್ರ ತಜ್ಞ: 'ಖಂಡಿತ, ಇದರಿಂದ ನೀವು ಓದಲು ಸಾಧ್ಯವಾಗಲೇ ಬೇಕು.'
ರೋಗಿ: 'ಡಾಕ್ಟ್ರೇ, ನಾನೆಂತಹ ಭಾಗ್ಯಶಾಲಿ, ಈ ಕನ್ನಡಕದಿಂದ ನಾನು ಓದಲು ಕಲಿಯುತ್ತೇನೆ ಎಂದು ತಿಳಿದುಕೊಂಡಿರಲೇ ಇಲ್ಲ!'

–ಶಂಕರೇಗೌಡ ತುಂಬಕೆರೆ, ಮಂಡ್ಯ